**PW-1:** ಮೀನಾಕ್ಷಮ್ಮ

ದಿನಾಂಕಃ **24.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಡಿ.ಕೆ. ವಕೀಲರಿಂದಃ

1. ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ತಾತ ಚಂದ್ರಶೇಖರಪ್ಪ ಮತ್ತು ತಂದೆ ಅಶ್ವತ್ಥನಾರಾಯಣ ರಾವ್ ರವರು ವೀರಮ್ಮನಹಳ್ಳಿಯಲ್ಲಿ ವಾಸವಿದ್ದರು ಎಂಬುದು ಸರಿ. ವೀರಮ್ಮನಹಳ್ಳಿಯಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಮನೆ ಇಂದಿಗೂ ಇರುತ್ತದೆ ಎಂಬುದು ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅದರ ನಂಬರ್ ಸಿಗಲಿಲ್ಲ. ಸದರಿ ಮನೆಯ ದಾಖ್ಲೆಗಳನ್ನು ನೀಡುವಂತೆ ಗ್ರಾಮ ಪಂಚಾಯಿತಿಗೆ ಅರ್ಜಿ ನೀಡಿಲ್ಲ. ನಾನು ಪಂಚಾಯಿತಿಗೆ ಅರ್ಜಿ ನೀಡಿಲ್ಲ ಹಾಗೂ ಯಾವುದೇ ಮಾಹಿತಿ ಕೇಳಿಲ್ಲ ಮತ್ತು ಉದ್ದೇಶಪೂರ್ವಕವಾಗಿ ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ 7 ಜನ ಮಕ್ಕಳ ಪೈಕಿ ಅನಸೂಯ, ಅಣ್ಣ ನಾಗಭೂಷಣ ತಮ್ಮ ರವೀಂದ್ರನಾಥ ಮೃತಪಟ್ಟಿದ್ದಾರೆ. 1 ನೇ ಪ್ರತಿವಾದಿ ನನ್ನ ಅಣ್ಣನ ಮಗಳು. ಈ ದಾವೆ ಸಲ್ಲಿಸಿದ ಸಂದರ್ಭ ಉಮಾ ರವರು ಜೀವಂತ ಇದ್ದರು. ಪ್ರಸ್ತುತ ಜೀವಂತ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಉಮಾ ರವರು ದಾವೆ ಚಾಲ್ತಿಯಲ್ಲಿದ್ದಾಗ ಮೃತಪಟ್ಟಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಮಾಹಿತಿ ನೀಡಿಲ್ಲ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

2. ದಾವಾ ಸ್ವತ್ತುಗಳು ನನ್ನ ತಾತನಿಂದ ಬಂದಿರುತ್ತವೆ. ನಮ್ಮ ತಾತನಿಂದ ಸ್ವತ್ತುಗಳು ಬಂದಿವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 3 ವರ್ಷಗಳ ಹಿಂದೆ ನಾನು ಪ್ರತಿವಾದಿಗಳನ್ನು ಭಾಗ ನೀಡುವಂತೆ ಕೇಳಿರುತ್ತೇನೆ. ಸ.ನಂ. 12/1 ರ ಸ್ವತ್ತು ನನ್ನ

ತಾಯಿಯ ಹೆಸರಿನಲ್ಲಿ ನಮೂದಾಗಿದೆ. ಸ.ನಂ. 12/3 ರ ಸ್ವತ್ತು ರಾಮ್ ರಾವ್, ಅಶ್ವತ್ಥನಾರಾಯಣ, ಸಿ. ಮಂಜುಳಾ ಮತ್ತು ಕೆ. ಉಮಾ ರವರ ಹೆಸರಿಗೆ ಜಂಟಿ ಬರುತ್ತಿದೆ ಎಂಬುದು ಸರಿ. ಸದರಿ ಪಿ. ಮಂಜುಳಾ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂಬುದು ಸರಿ. ಸ.ನಂ. 12/3 ರ ನನ್ನ ತಾತನ ಜೀವಿತ ಕಾಲದಲ್ಲಿ 29 ಎಕರೆ 13 ½ ಗುಂಟೆ ಇತ್ತು. ಸದರಿ ಸ್ವತ್ತಿನಲ್ಲಿ 33 ಎಕರೆ 26 ಗುಂಟೆ ಒಟ್ಟು ವಿಸ್ತೀರ್ಣ ಇತ್ತು ಎಂಬುದು ಸರಿ. ಸ.ನಂ. 12 ರ ಸ್ವತ್ತು 2023 ಕ್ಕೆ ರಾಮಾಂಜಿನೇಯಲು ರವರ ಹೆಸರಿಗೆ ಮಾರಾಟವಾಗಿತ್ತು. ರಾಮಾಂಜಿನೇಯ ರವರಿಗೆ ಸ್ವತ್ತು ಮಾರಾಟ ಮಾಡಿರುವ ವಿಚಾರ ಗೊತ್ತು. ಸದರಿ ರಾಮಾಂಜೀನೇಯಲು ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.